ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 18/12/20

# ಸಭಾಪತಿ ವಿಚಾರದಲ್ಲಿ ರಾಜ್ಯಪಾಲರ ಮೌನ

**ಬೆಂಗಳೂರು:** ರಾಜ್ಯ ವಿಧಾನ ಪರಿಷತ್‌ನಲ್ಲಿ ನಡೆದ ಗದ್ದಲ ಹಾಗೂ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯದ ಸೂಚನೆ ಸಂಬಂಧದಲ್ಲಿ ಎದುರಾದ ಗೊಂದಲ ಮುಂದುವರಿದಿದೆ. ಬಿಜೆಪಿ, ಜೆಡಿಎಸ್‌ನಿಂದ ರಾಜ್ಯಪಾಲರಿಗೆ ಮಂಗಳವಾರವೇ ದೂರು ಸಲ್ಲಿಸಲಾಗಿದೆ. ಕಾನೂನು ಪರಾಮರ್ಶೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ರಾಜ್ಯಪಾಲರು ಹೇಳಿದ್ದರು ಎಂದು ವರದಿಯಾಗಿತ್ತು. ಆದರೆ, ಈ ಬಗ್ಗೆ ರಾಜಭವನದಿಂದ ಸಂದೇಶ ಬಂದಿಲ್ಲ ಎನ್ನಲಾಗಿದೆ.

**ಜಿಜ್ಞಾಸೆಯಲ್ಲಿ ಜೆಡಿಎಸ್:** ಮುಂದಿನ ಹಂತದಲ್ಲಿ ಸಭಾಪತಿ ಹುದ್ದೆ ವಹಿಸಿಕೊಳ್ಳಬೇಕೊ, ಉಪ ಸಭಾಪತಿ ಸ್ಥಾನದಲ್ಲಿ ಮುಂದುವರಿಯಬೇಕೊ ಎಂಬ ಜಿಜ್ಞಾಸೆ ಜೆಡಿಎಸ್‌ಗೆ ಶುರುವಾಗಿದೆ.